ಹೇಳಬಹುದು. ಯಾರದೇ ಜೀವನ ಎನ್ನುವುದು ಮಾತಿನ ಮೇಲೆ ನಿಂತಿಲ್ಲ ಎನ್ನುವುದು ಮುಂದೆ ಯಾವತ್ತಾದರೂ ನಿನಗೆ ಅರ್ಥವಾಗಬಹುದು, ಅರ್ಥವಾಗದೇ ಹೋಗಬಹುದು. ಅದಕ್ಕೆ ನಾನು ಏನೂ ಮಾಡಲಾರೆ. ನಿನ್ನ ಇಷ್ಟ ಏನಿದೆಯೋ ಅದನ್ನು ಮಾಡು. ಮತ್ತೆ ಈ ಮಾತುಗಳು ಬೇಕಾಗಿಲ್ಲ. ನಿನ್ನೊಡನೆ ವಾದ ಮಾಡಲು ನನಗೆ ಪುರುಸೊತ್ತು ಇಲ್ಲ. ನಾನೀಗ ಪೇಟೆಗೆ ಹೋಗಬೇಕು' ಎಂದ. ಅದನ್ನು ಅವನು ಒತ್ತು ಕೊಟ್ಟು ಹೇಳಿದ ಎನ್ನುವುದು ಕಾತ್ಯಾಯಿನಿಗೂ ಗೊತ್ತಾಯಿತು. ಇನ್ನು ಇವನು ಮಾತಿಗೆ ಸಿಕ್ಕಲಾರ ಎನ್ನುವುದು ಅವಳಿಗೆ ತಿಳಿಯಿತು.

ರಾಹುಲ ಎದ್ದು ಹೊರಟ. ಮತ್ತೆ ಅವನು ಬಂದದ್ದು ಐದು ಗಂಟೆಗೆ. ಮನಗೆ ಬರಬೇಕೋ ಬೇಡವೋ ಎನ್ನುವ ದ್ವಂದ್ವದಲ್ಲಿಯೇ ಮನೆಗೆ ಕಾಲಿರಿಸಿದ್ದ. ಅವನು ಮನೆಯ ಮೆಟ್ಟಿಲು ಹತ್ತಿದ ಕೂಡಲೇ ಒಳಗಿದ್ದ ಕಾತ್ಯಾಯಿನಿ, 'ಇಲ್ಲ ನಾನು ಇನ್ನು ನಿಮ್ಮ ಜೊತೆಗೆ ಇರುವುದರಲ್ಲಿ ಯಾವ ಅರ್ಥವೂ ಇಲ್ಲ. ಆರು ಗಂಟೆಯ ಬಸ್ಸಿಗೆ ನಾನು ಮಂಗಳೂರಿಗೆ ಹೊರಡುತ್ತೇನೆ. ಹೇಗೂ ನಂದೀಶನ್ ಮನೆ ಮಾಡಿದ್ದಾರೆ. ನಿಮ್ಮ ಹಂಗು ನನಗೆ ಇಲ್ಲ' ಎಂದಳು.

ಅವರಿಬ್ಬರ ನಡುವೆ ಬಾಕಿಯಾಗಿದ್ದ ಮಾತುಗಳು ಹಾಗೆಯೇ ಉಳಿದವು. ನಂದೀಶನ್ ಮೊದಲು ಮದುವೆಯಾಗಿ ಅದು ಮುರಿದುಬಿದ್ದು ತನ್ನನ್ನು ಪ್ರೀತಿಸಲು ಶುರು ಮಾಡಿದ ಎಂದು ಹೇಳಬೇಕೆಂದುಕೊಂಡವಳು ಹೇಳಿರಲಿಲ್ಲ. ನಂದೀಶನ್ ಕೂಡಾ ಒಬ್ಬ ಗಂಡಸು ಎಂದು ಹೇಳಬೇಕೆಂದುಕೊಂಡಿದ್ದ ರಾಹುಲ ತನ್ನ ಮಾತುಗಳು ತುಟಿಗೆ ಬಂದಿದ್ದರೂ ಎದೆಯಲ್ಲಿಯೇ ಅದನ್ನು ಮುಚ್ಚಿ ಕೊಂಡಿದ್ದ.

ತಾನು ಹೇಳಿದಂತೆ ಕಾತ್ಯಾಯಿನಿ ಆರು ಗಂಟೆಗೆ ತನ್ನ ಸೂಟ್‌ಕೇಸ್ ತೆಗೆದುಕೊಂಡು ಹೊರಟಳು. ಐದು ಗಂಟೆಯಿಂದ ಆರು ಗಂಟೆಯವರೆಗೆ ಹತ್ತಾರು ಬಾರಿ ಮನೆಯ ಜಗುಲಿಯಿಂದ ಅಡುಗೆಯ ಮನೆಗೆ ಸುಳಿದಾಡಿದಳು. ಅವಳು ಮತ್ತೆ ಏನೋ ಮಾತಾಡ ಬೇಕಾಗಿತ್ತು. ಆದರೆ ರಾಹುಲನ ಮುಖವನ್ನು ನೋಡಿ ಯಾವ ಮಾತುಗಳೂ ಅವಳ ಬಾಯಿಯಿಂದ ಬರಲಿಲ್ಲ. ಸರ್ವರ ಜಾತಕವನ್ನು ಬರೆದ ಜೋಯಿಸರ ಮಗಳು ಕಾತ್ಯಾಯಿನಿ, ಈಜಲು ಗೊತ್ತಿರುವವಳು, ಸ್ನಾನವನ್ನು ಮಾಡಿ ದೇವರ ದೀಪವನ್ನು ಹಚ್ಚಿಟ್ಟು ಸೂಟ್‌ಕೇಸ್ ತೆಗೆದುಕೊಂಡು ಹೊರಡುವಾಗ ನೋಡಿಯೂ ನೋಡದಂತೆ ಇದ್ದ. ನೋಡಬೇಕು ಮತ್ತೆ ಮಾತಾಡಬೇಕು ಎಂದು ಅವನಿಗೆ ಅನಿಸಲಿಲ್ಲ. ಕಾತ್ಯಾಯಿನಿ ಜಗುಲಿಗೆ ಬಂದು ರಾಹುಲನನ್ನು ನೋಡಿದಳು. ಅವಳಿಗೆ ಅಳು ಬಂತು ಎನ್ನುವುದು ನಿಜ. ಆದರೂ ಸೆರಗಿನಲ್ಲಿ ಒರೆಸಿಕೊಂಡಳು. ಮೆಟ್ಟಿಲು ಇಳಿದಳು.

ಅವಳಿಗೆ ಗೊತ್ತೇ ಆಗದ ಸಂಗತಿಗಳು ಇದ್ದವು: ಅತ್ಯಂತ ಸೂಕ್ಷ್ಮ ಸಂವೇದನೆಯ ರಾಹುಲ ಶರ್ಮ ಮಧ್ಯೆ ಮೂರು ಸರ್ತಿ ಆತ್ಮಹತ್ಯೆಗೆ ಯತ್ನಿಸಿದ್ದ ಮತ್ತು ಅವಳ ಹಾಗೂ ನಂದೀಶನ್ ಕುರಿತಾದ ಸಂಗತಿಗಳು ಅವನಿಗೆ ಮೊದಲೇ ಗೊತ್ತಿತ್ತು. ಕಾತ್ಯಾಯಿನಿಯ ಸೂಟ್‌ಕೇಸ್‌ನಲ್ಲಿ ನಂದೀಶನ್ ಅವಳಿಗೆ ಬರೆದ ಪತ್ರಗಳ ರಾಶಿಯನ್ನು ಕದ್ದು ಓದಿದ್ದ. ಅವಳು ಡೈರಿಯಲ್ಲಿ ಬರೆದು ಇಟ್ಟ ಸೂಜಿಮೊನೆಯಂಥಾ ವಾಕ್ಯಗಳು ಅವನನ್ನು ಘಾಸಿಗೊಳಿಸಿದ್ದವು!

ಕಲಿಯಬೇಕಪ್ಪಾ ಮನುಷ್ಯನಾದವ. 1995 ಆಗಸ್ಟ್ 29 ಆ ದಿನ. ಆಗಸ್ಟ್ 29 ಅವನು ಹುಟ್ಟಿದ ದಿನವೂ ಹೌದು. ●

